**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 4548/2022**

**ಫಿರ್ಯಾದುದಾರರು** : ಶ್ರೀ.ಹೆಚ್.ಸಿ. ಪ್ರದೀಪ್‌ಕುಮಾರ್ ಬಿನ್ ಕೂಸಯ್ಯ
ವಯಸ್ಸು ಸುಮಾರು 38 ವರ್ಷ,
ವಾಸಃ ಹರದನಹಳ್ಳಿ ಗ್ರಾಮ, ಹುಲ್ಲಹಳ್ಳಿ ಹೋಬಳಿ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

**ವಿರುದ್ಧ**

**ಆರೋಪಿ** : ಶ್ರೀ.ನಿಂಗರಾಜು ಬಿನ್ ನಿಂಗಯ್ಯ,
ವಯಸ್ಸು ಸುಮಾರು 49 ವರ್ಷ,
ವಾಸಃ ಹೊಸಹೊಳಲು ಗ್ರಾಮ,
ಅಂತರಸಂತೆ ಹೋಬಳಿ,
ಹೆಚ್.ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಆರೋಪಿಯ ಹೇಳಿಕೆ**

ಪ್ರಶ್ನೆ 1 : ಈ ಪ್ರಕರಣದಲ್ಲಿ ಪಿರ್ಯಾದಿದಾರರ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ ?

ಉತ್ತರ **:**

ಪ್ರಶ್ನೆ 2 : ಈ ಪ್ರಕರಣದ ಫಿರ್ಯಾದುದಾರರಾದ ಫ್ರಾಸಾ-1-ಶ್ರೀ.ಹೆಚ್.ಸಿ. ಪ್ರದೀಪ್‌ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿಮ್ಮ ದರದ್ದು ನಿಮಿತ್ತ 10.03.2020 ರಂದು ರೂ.3,00,000/- ಕೈ ಸಾಲ ಪಡೆದು, ಆ ಸಾಲವನ್ನು ತನಗೆ ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿದ್ದು, ನಂತರ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ದಿನಾಂಕಃ 14.05.2020 ರಂದು ರೂ.3,00,000/- ಗಳಿಗೆ ಹೆಚ್.ಡಿ. ಕೋಟೆ ಶಾಖೆಗೆ ಸೇರಿದ ಸ್ಟೇಟ್ ಬ್ಯಾಂಕ್ ಆಫ್

ಇಂಡಿಯಾ ಗೆ ಸಂಬಂಧಪಟ್ಟ 833331 ಸಂಖ್ಯೆಯ ಚೆಕ್‌ನ್ನು ನಿಶಾನೆ ಪಿ-1 ರಂತೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಾ?

**ಉತ್ತರಃ**

**ಪ್ರಶ್ನೆ**-3: ಫ್ರಾಸಾ-1 ಮುಂದುವರಿದು ನಂತರ ಆರೋಪಿಯಾದ ನೀವು ತನಗೆ ನೀಡಿದ ಚೆಕ್‌ನ್ನು ನಗಧಿಕರಣಕ್ಕಾಗಿ ತಾನು ತನ್ನ ಖಾತೆಯುಳ್ಳ ನಂಜನಗೂಡಿನ ಚಂದ್ರವಾಡಿ ಶಾಖೆಯ ಕರ್ನಾಟಕ ಗ್ರಾಮೀಣ್ ಬ್ಯಾಂಕ್ ಗೆ ಸಲ್ಲಿಸಿದಾಗ ಆರೋಪಿಯಾದ ನಿಮ್ಮ ಖಾತೆಯ ಬಗ್ಗೆ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಬ್ಯಾಂಕಿನ ನಿಶಾನೆ ಪಿ-2 ರ ಹಿಂಬರಹದೊಂದಿಗೆ ದಿನಾಂಕ 29.05.2000 ರಂದು ಚೆಕ್ ವಾಪಸ್ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಾ?

ಉತ್ತರಃ

**ಪ್ರಶ್ನೆ**-4: ಫ್ರಾಸಾ-1 ಮುಂದುವರಿದುಃ ನಂತರ ನಿಶಾನೆ ಪಿ-1ರ ಚೆಕ್ ಅಮಾನ್ಯವಾದ ನಂತರ ಆರೋಪಿಯಾದ ನೀವು ಸದರಿ ಚೆಕ್‌ನ ಮೊತ್ತವನ್ನು ತನಗೆ ನೀಡದೆ ಮೋಸ ಮಾಡಿದ್ದರಿಂದ ತಾನು ಆರೋಪಿಯಾದ ನಿಮಗೆ ದಿನಾಂಕ 18.06.2000 ರಂದು ಕಾನೂನು ರೀತ್ಯಾ ನಿಶಾನೆ ಪಿ-3 ರಂತೆ ಲೀಗಲ್ ನೋಟಿಸ್‌ನ್ನು ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಾ?

ಉತ್ತರಃ

**ಪ್ರಶ್ನೆ**-5: ಫ್ರಾಸಾ-1 ಮುಂದುವರಿದುಃ ಆರೋಪಿಯಾದ ನಿಮಗೆ ತಾನು ನಿಶಾನೆ ಪಿ-3 ರಂತೆ ಕಳುಹಿಸಿದ ನೋಟೀಸ್‌ನ್ನು ಆರೋಪಿಯಾದ ನೀವು ದಿಃ 20.06.2000 ರಂದು ಪಡೆದುಕೊಂಡಿದ್ದು, ತದನಂತರ ಆರೋಪಿಯಾದ ನೀವು ಚೆಕ್ಕಿನ ಹಣವನ್ನು ತನಗೆ ಸಂದಾಯ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಾ?

ಉತ್ತರಃ

**ಪ್ರಶ್ನೆ**-6: ತಮ್ಮ ಪರವಾಗಿ ಏನಾದರೂ ಪ್ರತಿರಕ್ಷಣಾ ಸಾಕ್ಷಿ ಇದೆಯಾ?

ಉತ್ತರಃ

**ಪ್ರಶ್ನೆ**-7: ಈ ಕುರಿತು ತಾವು ಹೆಚ್ಚಿಗೆ ಏನಾದರೂ ಹೇಳುತ್ತೀರಾ?

**ಉತ್ತರಃ**

(ಮೇಲೆ ಹೇಳಿದ ಆರೋಪಿಯ ಹೇಳಿಕೆಯನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಲಾಯಿತು ಮತ್ತು ಆರೋಪಿತನು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು).

ದಿನಾಂಕಃ 11.07.2025.

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.